ಇ) ಈ ಮನೆಗಳಿಗೆ ವಸತಿ ಇಲಾಖೆಯ ಅನುಮೋದನೆ ದೊರೆತಿದೆಯೇ; ಹಣ ಬಿಡುಗಡೆಯಾಗಿದೆಯೆ; ಹಾಗಿದ್ದರೆ, ಅನುಮೋದನೆ ದೊರೆತ ದಿನಾಂಕ ಹಾಗೂ ಎಷ್ಟು ಹಣ ಬಿಡುಗಡೆಯಾಗಿದೆ; (ಪೂರ್ಣ ವಿವರಗಳನ್ನು ಒದಗಿಸುವುದು)

ಈ) ಈ ಹೆಚ್ಚುವರಿಯಾದ ಮನೆಗಳು ದೊರೆತ ಫಲಾನುಭವಿಗಳ ವಿವರವನ್ನು ಒದಗಿಸಿ, ಈಗಾಗಲೇ ಫಲಾನುಭವಿಗಳಿಗೆ ಆ ಮನೆಗಳು ದೊರೆತಿವೆಯೇ ವಿವರಣೆ ನೀಡಿ?

ಶ್ರೀ ವಿ.ಸೋಮಣ್ಣ (ಮಾನ್ಯ ವಸತಿ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ವಿದ್ಯುತ್ ಅಭಾವ

40 : (205)

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) ರಾಜ್ಯದಲ್ಲಿ ಮಳೆ ಅಭಾವದಿಂದ ರಾಜ್ಯದಲ್ಲಿನ ಜಲ ವಿದ್ಯುತ್ ಘಟಕಗಳಿಂದ ಮುಂಬರುವ ಬೇಸಿಗೆಯಲ್ಲಿ ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಮುಂಬರುವ ಬೇಸಿಗೆಯಲ್ಲಿ ಮುಂಜಾಗ್ರತೆಯಿಂದ ವಿದ್ಯುತ್ ಅಭಾವವನ್ನು ತಡೆಗಟ್ಟಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು;

ಇ) ಬೇಸಿಗೆಯಲ್ಲಿ ಪರೀಕ್ಷೆಗಳು ನಡೆಯುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ತಪ್ಪಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು)

ಅ) ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ ಮತ್ತು ಇ) ಸರ್ಕಾರವು ಮುಂಬರುವ ಬೇಸಿಗೆಯಲ್ಲಿನ. ವಿದ್ಯುತ್ ಅಭಾವವನ್ನು ನಿವಾರಿಸಲು ಮತ್ತು ವಿದ್ಯಾರ್ಥಿಗಳಿಗೆ ಅನಾನುಕೂಲವಾಗದ ರೀತಿಯಲ್ಲಿ ವಿದ್ಯುತ್ ಸರಬರಾಜು ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ಮುಂಬರುವ ಮಳೆಗಾಲದವರೆವಿಗೂ ರಾಜ್ಯದಲ್ಲಿರುವ ಜಲವಿದ್ಯುತ್ ಜಲಾಶಯಗಳಲ್ಲಿ ಲಭ್ಯವಿರುವ ನೀರನ್ನು ಯೋಜಿತವಾಗಿ ಬಳಸಿ ಹೆಚ್ಚು ಜಲವಿದ್ಯುತ್ ಉತ್ಪಾದನೆಗೆ ಕ್ರಮ ಕೈಗೊಳ್ಳಲಾಗಿದೆ.

2. ವಿದ್ಯುತ್ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ನಿವಾರಿಸಲು ಖಾಸಗಿ ವಿದ್ಯುತ್ ಉತ್ಪಾದಕರಿಂದ 15ನೇ ಜೂನ್ 2013 ರವರೆಗೆ ವಿದ್ಯುತ್ತನ್ನು ಖರೀದಿ ಮಾಡಲು ಒಪ್ಪಂದವನ್ನು ಮಾಡಿಕೊಳ್ಳಲಾಗಿದ್ದು, ಜೂನ್ 2013 ರವರೆಗೆ ಸರಾಸರಿ 29.38 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ತನ್ನು ಖರೀದಿಸಲಾಗುತ್ತಿದೆ. ಜನವರಿ–13 ರಿಂದ 15 ಜೂನ್ 2013 ರವರೆಗೆ ಹೆಚ್ಚುವರಿಯಾಗಿ 350 ಮೆ.ವ್ಯಾ. ವಿದ್ಯುತ್ ಖರೀದಿಗೆ ಕ್ರಮ ಕೈಗೊಳ್ಳಲಾಗಿದೆ.

ಕೆ.ಎಸ್.ಆರ್.ಟಿ.ಸಿ. ಡಿಪೋ ಮಂಜೂರು

113 (78)

ಶ್ರೀ ಸಿ.ಬಿ.ಸುರೇಶ್ ಬಾಬು(ಚಿಕ್ಕ ನಾಯಕನಹಳ್ಳಿ)

ಅ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರಕ್ಕೆ ಕೆ.ಎಸ್.ಆರ್.ಟಿ.ಸಿ ಡಿಪೋ ಅವಶ್ಯಕತೆಯಿರುವುದು ಸರ್ಕಾರ ಗಮನಕ್ಕೆ ಬಂದಿದಯೇ;

ಆ) ಹಾಗಿದಲ್ಲಿ, ಡಿಪೋ ಮಂಜೂರು ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

ಇ) ಈ ಸಾಲಿನಲ್ಲಿ ಡಿಪೋ ಮಂಜೂರು ಮಾಡಲಾಗುವುದೇ?